ತಂದೆಯವರ ಅನಾರೋಗ್ಯದ ಕಾರಣ ನಾನು ಬ್ಯಾಂಕಿನಿಂದ ದೀರ್ಘ ರಜೆ ತೆಗೆದುಕೊಂಡಿದ್ದೆ. ಮಧ್ಯಾಹ್ನದ ಸಮಯ. ಆರಾಮ ಕುರ್ಚಿಯಲ್ಲಿ ಕುಳಿತು ಪುಸ್ತಕವೊಂದನ್ನು ಓದುತ್ತಿದ್ದೆ. ಸುಷ್ಮಾ ಕಿಚನ್ನಿನಲ್ಲಿದ್ದಳು. ಹೊರಗಿನ ಬಾಗಿಲು ತೆರೆದಿತ್ತು.

ಮಮತಾ ಅಚಾನಕ್ಕಾಗಿ ಕಿಚನ್ನಿನೊಳಗೆ ನುಗ್ಗಿ, "ಆಂಟಿ, ನಿಮಗೆ ಧೋಲೆ ಮಾಡಲು ಬರುತ್ತದಾ?" ಎಂದು ಕೇಳಿದಳು.

"ಹಾಂ."

"ಹಾಗಾದರೆ, ನನಗೆ ಸ್ವಲ್ಪ ಕಲಿಸುತ್ತೀರಾ?"

"ಖಂಡಿತ ಕಲಿಸುತ್ತೇನೆ."

ಆಮೇಲೆ ಅವರು ಧೋಲೆಯ ಬಗ್ಗೆ ಮಾತಾಡತೊಡಗಿದರು. ಅದಾದ ಮೇಲೆ ಮತ್ತಿನ್ನೇನೊ ಮಾತಾಡುತ್ತಿದ್ದರು. ಕೊನೆಗೆ ಅವರ ಮಾತು ಸಾಥಿಯಾನವರೆಗೆ ಬಂದು ನಿಂತಿತು.

"ಮಮತಾ ಕಾಶೀರಾಮ ಅವರ ಮಗನ ಮದುವೆಯಲ್ಲಿ ಸ್ಟೋರ್ ರೂಮಿನಲ್ಲಿ ಸಾಥಿಯಾ ನುಸುಳಿ ದೊಡ್ಡ ಪಾತ್ರೆಯಲ್ಲಿ ತುಂಬಿಟ್ಟ ಕೆನೆ ತಿಂದನಂತೆ ಹೌದೆ? ಇದು ಸತ್ಯವೆ?" ಸುಷ್ಮಾ ಕೇಳಿದಳು.

ಮಮತಾ ನಗತೊಡಗಿದಳು.

"ಹೌದು, ಅದನ್ನೇ ನನಗೆ ತಿಳಿದುಕೊಳ್ಳಬೇಕಾಗಿದೆ."

"ಮಗನ ಮದುವೆಯಲ್ಲಿ ಈ ಜನರು ಅವನಿಂದ ದಿನವಿಡೀ ಕೆಲಸ ಮಾಡಿಸಿಕೊಂಡರು. ಹತ್ತಾರು ಕಡೆಗೆ ಅವನನ್ನು ಓಡಾಡಿಸಿದರು. ಆದರೆ ತಿಂಡಿ ತಿಂದೆಯಾ? ಊಟ ಮಾಡಿದೆಯಾ? ಎಂದು ಒಬ್ಬರೂ ಕೇಳಿರಲಿಲ್ಲ. ಬೆಳಗಿನ ತಿಂಡಿ ಮತ್ತು ಸಾಯಂಕಾಲದ ಚಹಾ ಮಾತ್ರ ಅವನಿಗೆ ದೊರೆಯುತ್ತಿತ್ತು. ಆಮೇಲೆ ಎಲ್ಲರೂ ಅವನ್ನು ತಮ್ಮ ತಮ್ಮ ಕೆಲಸಕ್ಕೆ ಹೊರಗೇ ಓಡಾಡುವಂತೆ ಮಾಡುತ್ತಿದ್ದರು. ಹೋಗಲಿ, ಮದುವೆಗೂ ಆತನನ್ನು ಕರೆದಿರಲಿಲ್ಲ. ಮದುವೆಯ ದಿನ ಮ್ಯಾರೇಜ್ ಹಾಲಿನಲ್ಲಿ ಊಟತಿಂಡಿಗಳ ವ್ಯವಸ್ಥೆಯಿತ್ತು. ಅಂದು ಮುಂಜಾನೆಯೇ ಅವನನ್ನು ಯಾರೊ ಕೆಲಸಕ್ಕೆಂದು ಹೊರಗೆ ಕಳಿಸಿದ್ದರು.

ಕೆಲಸ ಮುಗಿಸಿ ಸಾಥಿಯಾ ಹಿಂದಿರುಗಿದಾಗ ಅಲ್ಲಿ ಯಾರೂ ಇರಲಿಲ್ಲ. ಮ್ಯಾರೇಜ್ ಹಾಲಿನ ವಿಳಾಸ ಇವನಿಗೆ ಗೊತ್ತಿರಲಿಲ್ಲ. ಅವನ ಬಳಿ ಹಣವೂ ಇರಲಿಲ್ಲ. ಮೂರುದಿನ ಆತ ಉಪವಾಸವಿದ್ದ. ಸ್ಟೋರ್ ರೂಮಿನಲ್ಲಿ ಏನಾದರೂ ದೊರೆಯಬಹುದೆಂದು ಆತ ಅಲ್ಲಿಗೆ ಹೋದ. ಆದರೆ ಅಲ್ಲಿ ತಿನ್ನಬಹುದಾದ್ದೇನೂ ಆತನಿಗೆ ಕಾಣಿಸಲಿಲ್ಲ. ಒಂದು ಮೂಲೆಯಲ್ಲಿ ಕೆನೆಯನ್ನು ತುಂಬಿಟ್ಟ ಪಾತ್ರೆ ಕಾಣಿಸಿತು. ಸರಿ, ಹಿಂದೆ ಮುಂದೆ ನೋಡದೆ ಪಾತ್ರೆಯಲ್ಲಿದ್ದ ಕೆನೆಯನ್ನೆಲ್ಲ ಬರಿದು ಮಾಡಿದ. ಹೇಳಿರಿ, ಮೂರು ದಿನ ಉಪವಾಸವಿದ್ದ ಮನುಷ್ಯ ಇದನ್ನಲ್ಲದೆ ಬೇರೆ ಇನ್ನೇನು ಮಾಡಬಹುದಿತ್ತು ಆಂಟಿ ?" ಕೇಳಿದಳು ಮಮತಾ.

ಆರಾಮ ಕುರ್ಚಿಯಲ್ಲಿ ಕುಳಿತಿದ್ದ ನಾನು ಮಮತಾ ಹೇಳಿದ್ದರ ಸತ್ಯವನ್ನು ಮನಗಂಡೆ.

★★★

ಒಂದು ಮುಂಜಾವು ಸಾಥಿಯಾ ಒಮ್ಮೆಲೆ ಬಾಗಿಲೆದುರು ಹಾಜರಾದ. ಕಂದು ಬಣ್ಣದ ನನ್ನ ಪ್ಯಾಂಟ್ ಮತ್ತು ತಿಳಿನೀಲಿ ಬಣ್ಣದ ನನ್ನ ಶರ್ಟ್ ಅವನು ತೊಟ್ಟಿದ್ದ. ಗಡ್ಡಮೀಸೆಗಳನ್ನು ಸ್ವಚ್ಛಗೊಳಿಸಿದ್ದ. ತಲೆಯ ಮೇಲಿನ ಕೂದಲುಗಳನ್ನು ಹದವಾಗಿ ಕತ್ತರಿಸಿಕೊಂಡಿದ್ದ.

"ಸಾಹೇಬರೇ, ತಮ್ಮ ಬಟ್ಟೆಗಳನ್ನೆ ಆಲ್ಟರ್ ಮಾಡಿಸಿಕೊಂಡು ತೊಟ್ಟಿದ್ದೇನೆ, ನೋಡಿರಿ" ಎಂದ.